ನನಗೆ ತುಂಬಾ ಕಷ್ಟ ಆಗಿಬಿಟ್ಟಿದೇರೀ... ಎಲ್ಲದರಲ್ಲೂ ಮೂಗು ತೂರಿಸಿಕೊಂಡು ಬರುತಾನೆ. ನಿಮ್ಮಮ್ಮ ದೇವರಂಥೋರು... ಒಂದು ದಿನಾ ನನ್ನ ಮೇಲೆ ಅಧಿಕಾರ ಚಲಾಯಿಸಿಲ್ಲ... ಇಂಥ ಮನೆ ಸೇರಿದೆನಲ್ಲಾ ಅನ್ನೋ ಖುಷೀಲಿದ್ದರೆ ಈ ಐನಾತಿ ದಿನಾ ಕಾಟ ಕೊಡುತಾನಲ್ರೀ... ಅತ್ತೇಕಾಟಕ್ಕೂ ದೊಡ್ಡ ಕಾಟ. ದುಡ್ಡು ಕೊಟ್ಟು ಹೀಗೆಲ್ಲ ಕಾಟ ತಂದುಕೊಳ್ಳಾದಾ? ಮೊದಲು ಕಳಿಸಿಬಿಡ್ರೀ...' ಮಾತು ಹೆಚ್ಚುತ್ತಲೇ ಹೋಯಿತು. ಒಡನೆ ಅಳುವೂ ದೊಡ್ಡದಾಯಿತು.

'ಏನು ವಿಷಯ ಅಂತ ಹೇಳದೇ ಸುಮ್ಮನೆ ಅಳುತಾ ಕೂತರೆ ನನಗೇನೂಂತ ಗೊತ್ತಾಗುತ್ತೇ? ಏನು ಮಾಡಿದಾಂತ ಹೇಳಬಾರದಾ?'

'ಇನ್ನೇನ್ರೀ ಮತ್ತೆ? ಆಳುಗಳ ಬಾಯಲ್ಲಿ ಕೇಳಬಾರದ ಮಾತು ಕೇಳೋದಾಗಿದೆ... ಸ್ನಾನ ಮಾಡಿದೆ ತಿಂಡಿ ತಿನ್ನಬಾರದು, ನರಕ ಬರುತ್ತೇ ಅಂತಾನಲ್ರೀ, ಶನೀ... ಮನೆಯ ಲಕ್ಷ್ಮಿ ನೀನು. ಮಂಗಳವಾರ, ಶುಕ್ರವಾರ ಒಪ್ಪೊತ್ತು ಮಾಡಿದರೆ ಶ್ರೇಯಸ್ಸೂಂತಾನೆ. ಮೊದಲೇ ಅಸಿಡಿಟೀಂದ ಹೈರಾಣಾಗಿದೀನಿ. ಉಪವಾಸ ಮಾಡೂನ್ನೋಕೆ ಇವನ್ಯಾರ್ರೀ? ಒಳ್ಳೇ ತೋಲಾಂಡರಾಯ ಆದನಲ್ಲ!!'

ಈ ಮಾತು ಕೇಳಿದ್ದೇ, ರೂಮಿನಲ್ಲಿದ್ದ ಅಮ್ಮ, ಒಮ್ಮೆಗೇ ನಮ್ಮ ನಡುವವತರಿಸಿ, 'ಅವನು ಹೇಳೋದರಲ್ಲಿ ತಪ್ಪೇನಿದೆಯೋ? ಬ್ರಾಹ್ಮಣರಾಗಿ ಹುಟ್ಟಿದ ಮೇಲೆ ಇದನ್ನೆಲ್ಲಾ ಮಾಡಲೇಬೇಕಲ್ಲವಾ?' ಅಂತಂದಳು.

'ನೀನು ಸುಮ್ಮನಿರಮ್ಮಾ... ಸುಮ್ಮನೆ ಮಧ್ಯೆ ಬಾಯಿ ಹಾಕಬೇಡ!' ಎಂದು ರೇಗಿದೆ.

'ಅಲ್ಲ ಕಣೋ... ನಾನೇನು ಮಾತಾಡಿದೆ ಹೇಳು? ಒಳ್ಳೇ ಆಚಾರ ವಿಚಾರ ಇಟ್ಟುಕೋ ಅನ್ನೋದು ತಪ್ಪಂದರೆ ಹಿಂದಿನೋರು ಮಾಡಿದ ಪ್ರತಿಯೊಂದೂ ತಪ್ಪೇ ಅಂತಾಯಿತು... ಅವರೆಲ್ಲ ಸುಮ್ಮಸುಮ್ಮನೆ ಶಾಸ್ತ್ರ ಮಾಡಲಿಲ್ಲ ತಿಳೀತಾ? ಸಂಜೆ ದೇವಸ್ಥಾನಕ್ಕೆ ಬಾ... ಪಾಂಡುರಂಗಿ ಅಂತ ಒಬ್ಬರು ಗೀತೆಯ ಮೇಲೆ ಪ್ರವಚನ ಕೊಡುತಾರೆ... ಕೇಳಿಸಿಕೋ! ಆಗ ನಿನಗೆ ಅರ್ಥವಾಗುತ್ತೆ...'

'ಅಲ್ಲಮ್ಮಾ... ಈ ಊರಿನಲ್ಲಿ ಯಾವುದೋ ಮೂಲೇಲಿ ಟ್ರಾಫಿಕ್ಕು ನಡುವೆ ಸಿಕ್ಕೊಂಡು ಒದ್ದಾಡುತಿರುತೀನಿ... ಸುಮ್ಮನೆ ಪ್ರವಚನ ಕೇಳಿಸಿಕೋ ಅಂತೀಯಲ್ಲಾ! ಅರ್ಥವಾಗಲ್ಲವಾ ನಿನಗೆ?'

'ನೀನೇನೇ ಹೇಳು... ಆ ಹುಡುಗ ಹೇಳಿದ್ದರಲ್ಲಿ ತಪ್ಪೇನಿಲ್ಲ... ದೊಡ್ಡವರು ಆಡೋದನ್ನೇ ಆಡಿದ್ದಾನೆ ಅಷ್ಟೇ...'

ಮನೆಗೆ ಹಿರೀಕಳಾದ ಈ ನನ್ನ ಅಮ್ಮ, ನನ್ನೆಲ್ಲ ಭಾವನೆಗಳನ್ನೂ ಒರೆಸಿ ಬದಿಗಿಟ್ಟ ಮೇಲೆ ದೂಸರಾ ಮಾತುಂಟೆ? ಫರಮಾನೆಂದುಕೊಂಡು ಸುಮ್ಮಗಾಗುವುದಾಯಿತು! ಇನ್ನು ನನ್ನೀ ಹೆಂಡತಿಯೋ, ಯಾವೊತ್ತೂ ಅತ್ತೆಗೆ ಎದುರಾಡಿದವಳಲ್ಲ. ಅಮ್ಮನೂ ಸೊಸೆಯ ಮೇಲೆ ಅಧಿಕಾರ ಚಲಾಯಿಸಿದವಳಲ್ಲ. ಅಂತಿಂತಲ್ಲದ ಸಾಮರಸ್ಯ ಈರ್ವರ ನಡುವೆ! ಎಂತಲೇ, ಅಮ್ಮ ತಪಸ್ಸಿನ ಪರವಹಿಸಿ ಮಾತು ಹೇಳಿದ್ದೇ, ಹೆಂಡತಿ ಅಳು ನುಂಗಿಕೊಂಡೆದ್ದು ರೂಮಿಗೆ ಹೋದಳು. ಆದರೆ ಮೋರೆಯಲ್ಲುಳಿದ ಧುಮುಧುಮು ಮಾತ್ರ ತಗ್ಗಲಿಲ್ಲ. ಹಿಂಬಾಲಿಸಿದೆ. ರೂಮು ಹೊಕ್ಕಿದ್ದೇ, ಇವಳು, ತನ್ನೆರಡೂ ಕೈಯೆತ್ತಿ ಜೋಡಿಸಿ ಮುಗಿದು, 'ಆಯಿತಲ್ಲಾ ಮಂಗಳಾರತಿ!' ಎಂದು ನನ್ನನ್ನೇ ಹೀಯಾಳಿಸಿಬಿಟ್ಟಳು!!

ನನಗೆ ತಪಸ್ಸಿನ ಮೇಲೆ ವಿಪರೀತ ಕೋಪವುಂಟಾಯಿತು. 'ತಪಸ್ಸ್...' ಎಂದು ಏಕಾಏಕಿ